**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 47/2024**

ಪಿ.ಡಬ್ಲುಃ 5 ಸಿಡಬ್ಲುಃ 7

| | | |
|---|---|---|
| ಸಾಕ್ಷಿಯ ಹೆಸರು | : | ಸುಭಾಷ ಚಂದ್ರ |
| ತಂದೆಯ ಹೆಸರು | : | ಬಸಣ್ಣ |
| ವಯಸ್ಸು | : | 47 ವರ್ಷ |
| ವೃತ್ತಿ | : | ಕಿರಾಣಿ ಅಂಗಡಿ |
| ವಾಸಸ್ಥಳ | : | ಎತ್ತಿನ ಬೂದಿಹಾಳ್ |

**ಸತ್ಯಪ್ರತಿಜ್ಞೆ ಮಾಡಿದ ದಿನಾಂಕಃ 03.12.2025**

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-**

**1)** ನನಗೆ ಚಾಸಾ-1 ಇವರ ಪರಿಚಯವಿದೆ. ನನಗೆ ಚಾಸಾ-6 ಇವರ ಪರಿಚಯವಿದೆ. ಈಗ ನೋಡುತ್ತಿರುವ ನೋಟೀಸಿಗೆ ನಾನು ಸಹಿ ಮಾಡಿದ್ದೇನೆ. ಸದರಿ ನೊಟೀಸನ್ನು ನಿಪಿ-13 ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ದಿನಾಂಕ 29.02.2024 ರಂದು ಮಹಿಳಾ ಪೊಲೀಸ್ ಠಾಣೆಯ ಪಿ.ಎಸ್.ಐ ಎತ್ತಿನ ಬೂದಿಹಾಳ ಗ್ರಾಮಕ್ಕೆ ಬಂದು ನಿಪಿ-13 ಕ್ಕೆ ಸಹಿ ಪಡೆದಿರುತ್ತಾರೆ. ಪಾರ್ವತಿ ಇವಳು ಆತ್ಮಹತ್ಯೆ ಮಾಡಿಕೊಂಡಿರುವ ಕುರಿತು ಪೆದ್ದಮ್ಮ ದೇವಸ್ಥಾನದ ಹತ್ತಿರ ಪಂಚನಾಮೆ ಮಾಡುವ ಕುರಿತು ನಿಪಿ-13 ಕ್ಕೆ ಸಹಿ ಪಡೆದಿರುತ್ತಾರೆ. ಪೆದ್ದಮ್ಮ ದೇವಸ್ಥಾನದ ಹತ್ತಿರ ಪಂಚನಾಮೆ ಮಾಡುವ ಕಾಲಕ್ಕೆ ನಾನು ಹಾಗು ಚಾಸಾ-6 ಹಾಜರಿದ್ದೆವು.

**2)** ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಲಸಲಾಗಿದ್ದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-2 ಸಿ ಎಂದು ಗುರುತಿಸಲಾಯಿತು. ಪಂಚನಾಮೆ ಮಾಡಿದ ನಂತರ ನಮ್ಮ ಸಹಿ ಪಡೆದಿರುತ್ತಾರೆ. ನಂತರ ಭಾವಚಿತ್ರವನ್ನು ತೆಗೆದಿರುತ್ತಾರೆ. ಸದರಿ ಭಾವಚಿತ್ರ ವನ್ನು ಈಗ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದೆ. ಆ ಜಾಗೆಯಿಂದ ಪಾರ್ವತಿ ಇವಳನ್ನು ಆರೋಪಿತರು ಕರೆದುಕೊಂಡು ಹೋದ ಬಗ್ಗೆ ಪೊಲೀಸರು ಪಂಚನಾಮೆ ಮಾಡಿರುತ್ತಾರೆ.

3) ಪಂಚನಾಮೆ ಮಾಡುವ ಕಾಲಕ್ಕೆ ನಿಪಿ-4 ನಕ್ಷೆಯನ್ನು ತೆಗೆದಿರುತ್ತಾರೆ. ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲು 1 ಹಾಗು 3 ಆರೋಪಿತರ ಪರವಾಗಿ ಶ್ರೀ ಎಮ್.ಎ.ಬಿ ವಕೀಲರಿಂದ

4) ನಾನು ಹೋದಾಗ ಆ ಪ್ರಶ್ನಿತ ಸ್ಥಳದಲ್ಲಿ ಯಾವುದೇ ವಸ್ತುಗಳು ಇರಲಿಲ್ಲ. ಪ್ರಶ್ನಿತ ಸ್ಥಳದಲ್ಲಿ ಬೈಕ್ ಓಡಾಡಿದ ಬಗ್ಗೆ ಟೈರ್ ಮಾರ್ಕಗಳು ಇರಲಿಲ್ಲ. ಪೆದ್ದಮ್ಮ ದೇವಸ್ಥಾನದ ಹೆಬ್ಬಾಗಿಲಿನಿಂದ ಪ್ರಶ್ನಿತ ಸ್ಥಳ ನಿಖರವಾಗಿ 30 ಅಡಿ ದೂರದಲ್ಲಿದೆ. ಪ್ರಶ್ನಿತ ಪಂಚನಾಮೆ ಮಾಡುವ ಕಾಲಕ್ಕೆ ನಮ್ಮ ಸಮಕ್ಷಮ ಜಾಗೆಯ ಅಳತೆ ಮಾಡಲಿಲ್ಲ. ಪ್ರಶ್ನಿತ ಸ್ಥಳ ಪೆದ್ದಮ್ಮ ದೇವಸ್ಥಾನದ ಹೆಬ್ಬಾಗಿಲಿನಿಂದ 30 ಅಡಿ ದೂರದಲ್ಲಿದ ಎಂದು ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಸರಿ. ಚಾಸಾ-1 ಇವರು ಈ ಪ್ರಶ್ನಿತ ಸ್ಥಳವನ್ನು ಮೊದಲು ನೋಡಿರಲಿಲ್ಲ ಎಂದರೆ ಸರಿ.

5) ಪ್ರಶ್ನಿತ ಸ್ಥಳವನ್ನು ಮೊದಲು ನೋಡಿದವರು ಯಾರು ತೋರಿಸಿಲ್ಲ ಎಂದರೆ ಸರಿ. ಚಾಸಾ-6 ಇವರು ಈ ಮೊದಲು ಸ್ಥಳವನ್ನು ನೋಡಿದ್ದೇನೆ ಎನ್ನುವ ಬಗ್ಗೆ ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಸರಿ. ನನಗೆ ಪ್ರಶ್ನಿತ ಸ್ಥಳದ ಬಗ್ಗೆ ಗೊತ್ತಿರಲಿಲ್ಲನೊಟೀಸು ನೀಡಿದ ಸ್ಥಳದಲ್ಲಿ ನಿಪಿ-2 ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಇವರು ನನಗೆ ಸಂಬಂಧಿಕರಾಗಬೇಕು ಎಂದರೆ ಸರಿ. ನಿಪಿ-2 ಪಂಚನಾಮೆ ಮಾಡಲು, ಖಾಲಿ ಹಾಳೆಗಳ ಮೇಲೆ ನನ್ನ ಸಹಿ ಪಡೆದು ನಂತರ ಬರೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನನನ್ನ ಸಮಕ್ಷಮ ನಕ್ಷೆಯನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನಿಪಿ-4 ಖಾಲಿ ಹಾಳೆಯ ಮೇಲೆ ನನ್ನ ಸಹಿ ಪಡೆದಿದ್ದಾರೆ ನಂತರ ನಕ್ಷೆಯನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ.

6) ನನಗೆ ಪಂಚನಾಮೆ ಯ ಬಗೆ ಹಾಗುನಕ್ಷೆಯ ಬಗ್ಗೆ ಯಾವುದೇ ವಿಷಯ ಗೊತ್ತಿರದಿದ್ದರೂ ಕೂಡ ಚಾಸಾ-1 ಇವರು ನನ್ನ ಸಂಬಂಧಿಕರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

SC No.47/2024
PW- 5

<u>ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಬಿ.ವಿ.ಬಿ ವಕೀಲರಿಂದಃ</u>

ಶ್ರೀ ಬಿ.ವಿ.ಬಿ ವಕೀಲರು ಶ್ರೀ ಎಮ್.ಎ.ಬಿ ವಕೀಲರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

C/c, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.